ಆ) ರಾಜೀವ್ ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಎಪಿಎಲ್ ಫಲಾನುಭವಿಗಳಿಗೆ ಸಹಪಾವತಿ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುತ್ತಿದೆ. ಉಚಿತ ಚಿಕಿತ್ಸೆ ನೀಡಲಾಗುವುದಿಲ್ಲ.

ಎಪಿಎಲ್ ಕಾರ್ಡುದಾರರಿಗೆ ರಾಜೀವ್ ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ 7 ಮಾರಣಾಂತಿಕ ಖಾಯಿಲೆಗಳಾದ ಕ್ಯಾನ್ಸರ್, ಹೃದ್ರೋಗ, ಮೂತ್ರಪಿಂಡದ ತೊಂದರೆ, ನರರೋಗ, ಗಂಭೀರ ಸ್ವರೂಪದ ಅಪಘಾತ, ಸುಟ್ಟಗಾಯ ಮತ್ತು ನವಜಾತ ಶಿಶುಗಳು / ಚಿಕ್ಕಮಕ್ಕಳಿಗೆ ಸಂಬಂಧಿಸಿದ ಖಾಯಿಲೆಗಳಿಗೆ 449 ಶಸ್ತ್ರಚಿಕಿತ್ಸೆ / ಚಿಕಿತ್ಸೆಗಳನ್ನು ಸಹಪಾವತಿ ಆಧಾರದ ಮೇಲೆ ನೀಡಲಾಗುತ್ತಿದೆ.

ಸರ್ಕಾರಿ ನೌಕರರಿಗೆ ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಸರ್ಕಾರವು ಜ್ಯೋತಿ ಸಂಜೀವಿನಿ ಯೋಜನೆಯನ್ನು ಪ್ರಕಟಿಸಿದ್ದು, ಮೇಲೆ ನಮೂದಿಸಿದ 7 ಮಾರಣಾಂತಿಕ ಕಾಯಿಲೆಗಳಿಗೆ 449 ಶಸ್ತ್ರಚಿಕಿತ್ಸೆ / ಚಿಕಿತ್ಸೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಇ) ಬಂದಿದೆ

ಈ) ಇಲ್ಲ. ವೈದ್ಯಕೀಯ ಮರುಪಾವತಿ ಬಿಲ್ಲುಗಳನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ಆರ್.ಐ.ಡಿ.ಎಫ್ ಮತ್ತು ಎಸ್.ಆರ್.ಹೆಚ್.ಎಂ ಯೋಜನೆ

1642(1865); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) 2014–15ನೇ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆರ್.ಐ.ಡಿ.ಎಫ್ ಮತ್ತು ಎಸ್.ಆರ್.ಹೆಚ್.ಎಂ ಯೋಜನೆಯಡಿ ಯಾವ ಯಾವ ಯೋಜನೆಗಳನ್ನು ಜಾರಿ ಮಾಡಲಾಗಿದೆ;

ಆ) ಪ್ರಸಕ್ತ ಸಾಲಿನಲ್ಲಿ ಕೋಲಾರ ಜಿಲ್ಲೆಯ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಈ ಯೋಜನೆಗಳಿಂದ ಎಷ್ಟು ಜನಗಳಿಗೆ ಅನುಕೂಲಗಳಾಗಿದೆ (ವಿಧಾನಸಭಾವಾರು ವಿವರ ಒದಗಿಸುವುದು);

ಇ) ಇದಕ್ಕಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ವೆಚ್ಚ ಮಾಡಿದ ಹಣವೆಷ್ಟು;

ಈ) ಈ ಯೋಜನೆಗಳಲ್ಲಿ ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ ಯಾವ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿದೆ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2014–15ನೇ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆರ್‌ಐಡಿಎಫ್ ಯೋಜನೆಯಲ್ಲಿ ಯಾವುದೇ ಕಾಮಗಾರಿಗಳು ಮಂಜೂರು ಆಗಿರುವುದಿಲ್ಲ ಮತ್ತು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಮಾಡಲಾಗಿದೆ. ಜನನಿ ಸುರಕ್ಷಾ ಯೋಜನೆ, ಮಡಿಲು ಯೋಜನೆ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಕುಟುಂಬ ಕಲ್ಯಾಣ ಕಾರ್ಯಕ್ರಮ, ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರು (ASHA), ನಗರ ಆರೋಗ್ಯ ಕೇಂದ್ರಗಳ ಸೇವೆ, ಶಾಲಾ ಆರೋಗ್ಯ ಕಾರ್ಯಕ್ರಮ, 24x7 ಪ್ರಾ.ಆ.ಕೇಂದ್ರಗಳಲ್ಲಿ ಹೆರಿಗೆ ಸೇವೆ, ಜನನಿ ಸುರಕ್ಷಾ ವಾಹಿನಿ ಮತ್ತು ನಗು ಮಗು (ಅಂಬ್ಯುಲೆನ್ಸ ಸೇವೆ), ಆರೋಗ್ಯ ಕವಚ–108 ಮತ್ತು ಲಸಿಕಾ ಕಾರ್ಯಕ್ರಮ, ಐಡಿಎಸ್‌ಪಿ, ಎನ್‌ವಿಬಿಡಿಸಿಪಿ, ಎನ್‌ಎಲ್‌ಇಪಿ, ಎನ್‌ಪಿಸಿಬಿ, ಆರ್‌ಎನ್‌ಟಿಸಿಪಿ, ಎನ್‌ಪಿಪಿಸಿಎಫ್, ಎನ್‌ಪಿಸಿಡಿಸಿಎಸ್ ಈ ಎಲ್ಲಾ ಕಾರ್ಯಕ್ರಮಗಳು ಎನ್‌ಆರ್‌ಎಚ್‌ಎಂ ಯೋಜನೆ ಅಡಿಯಲ್ಲಿ ಬರುತ್ತವೆ.

ಆ)

ಕಾರ್ಯಕ್ರಮ	ಬಂಗಾರಪೇಟೆ	ಕೆಜಿಎಫ್	ಕೋಲಾರ	ಮಾಲೂರು	ಮುಳಬಾಗಿಲು	ಶ್ರೀನಿವಾಸಪುರ
ಆಶಾ	98	48	211	110	144	153
ಜೆಎಸ್ ವೈ	1044	968	2889	1396	1873	1439
ಜೆಎಸ್ ಎಸ್ ಕೆ	1982	1856	3433	1512	2750	2044
ಕುಟುಂಬ ಕಲ್ಯಾಣ	975	446	1210	600	768	699
ತಾಯಿ ಬಾಗ್ಯ ಪ್ಲಸ್	11	0	03	0	56	0

ಇ) ಈ ಕಾರ್ಯಕ್ರಮಗಳಿಗಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ವೆಚ್ಚ ಮಾಡಿರುವ ಅನುದಾನ ರೂ. 2,40,07,600 (ಎರಡು ಕೋಟಿ ನಲವತ್ತು ಲಕ್ಷ ಏಳು ಸಾವಿರದ ಆರು ನೂರು ಮಾತ್ರ)

ಈ) ಈ ಯೋಜನೆಗಳಲ್ಲಿ ಮಾಲೂರು ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ ಎನ್ಆರ್ಹೆಚ್ಎಂ ಕಾರ್ಯಕ್ರಮದ ಮಾರ್ಗಸೂಚಿಗಳಂತೆ ಈ ಎಲ್ಲಾ ಕಾರ್ಯಕ್ರಮಗಳ ಸೌಲಭ್ಯವನ್ನು ಮಾಲೂರು ತಾಲ್ಲೂಕಿಗೂ ಸಹ ಕಲ್ಪಿಸಲಾಗಿದೆ.

ನೌಕರರನ್ನು ಖಾಯಂಗೊಳಿಸುವುದು

1643(1866); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಗುತ್ತಿಗೆ ಆಧಾರದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು;

ಆ) ದಿನಗೂಲಿ ನೌಕರರನ್ನು ಯಾವ ಆಧಾರದ ಮೇಲೆ ನೇಮಕ ಮಾಡಲಾಗಿದೆ; ಇವರಿಗೆ ಮಾಸಿಕವಾಗಿ ನೀಡುತ್ತಿರುವ ವೇತನ ಮತ್ತು ಭತ್ಯೆ ಎಷ್ಟು;